9. ಈ ರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯುದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ನಷ್ಟದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಪರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 15 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ದುಸರಾ ಹರಾಜು ಮಾಡಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು 15 ದಿವಸಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು. ಇಜಾರೆ ಮೊಬಲಗಿನ ಬಾಕಿಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಪೂರಾ ಹಣ ಪಾವತಿ ಮಾಡಿದನಂತರ ಬಾಬು ಸುಫರ್ದು ಕೊಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರ್ರೆ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೆಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಗ್ರಾಮ ಅಮರ್ಬೆ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ. ಮತ್ತು ಬಾವಲಿ ಕೀತುನೆಯಲ್ಲಿರುವ ಜೇನಿಗೂ ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ವಗ್ಯೆರೆ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

16. ಇಜಾರೆದಾರರ ಕಡೆ ಕೂಲಿ ಆಳುಗಳು ಬಾಬು ಜವಾವಣೆ ಬಗ್ಯೆ ಸ್ವೇಟು ಫಾರೆಸ್ಟುಗಳು ಮತ್ತು ಅಮೃತಮಹಲ್ ಕಾವಲುಗಳಿಗೆ ಪ್ರವೇಶಿಸಲು ರೇಂಜು ಆಫಿಸರಗಳಿಂದ ಚೀಟುಗಳೆನ್ನು ಪಡದುಕೊಳ್ಳಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ರಿ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇರ್ಷ, ತಾರೀಖು 6ನೆ ಸೆಪ್ಟಂಬರ್ 1909.

1900ನೆ ಮೈಸೂರು ಫಾರೆಸ್ಟು ರೆಗ್ಯುಲೇರ್ಷ 40ನೆ ಸೆಕ್ಷೆ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪ್ಸೀಲ್‌ನಂತೆ ನಾಟಾಗಳು ಶಿವಮೊಗ್ಗ ಡಿಸ್ಟ್ರಿಕ್ಟು ಚನ್ನಗಿರಿ ರೇಂಜು ಮ್ಯಾಳನಾಯಕನಕಟ್ಟೆ ಡಿಸ್ಟ್ರಿಕ್ಟು ಜಂಗ್ಲಿಯಲ್ಲಿ ಶಿಕ್ಕಿದವು.

ಇವುಗಳಿಗೆ ಹಕ್ಕುದಾರರು ಯಾರಾದರೂ ಇದ್ದಲ್ಲಿ ಅವರು ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಏಜೆಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇರ್ಷ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವೆರ ರೂಬುರೂಬು ಹಾಜರಾಗಿ ಅವರ ಹಕ್ಕನ್ನ ನಿರ್ಧರಪಡಿಸಿಕೊಟ್ಟು ಮುಂದು ತೆಗದುಕೊಂಡು ಹೋಗಬಹುದು. ತಪ್ಪಿದರೆ ಸದರಿ ಜಿಲ್ಲುಗುಗಳನ್ನ ಸರ್ಕಾರಕ್ಕೆ ಕೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ. ಮತ್ತು ಯಾವಹಕ್ಕೂ ನಂತರ ಅಂಗೀಕರಿಸಲ್ಪಡಲಾರದು.

ಜಾತಿ.	ಸಂಖ್ಯೆ.	ಸಲೆ ಅಡಿ.	ದೊರತ ಸ್ಥಳ.	ಷರಾ.
ಸಾಗುವಾನಿ ...	17	33½	ಮ್ಯಾಳನಾಯಕನಕಟ್ಟೆ ಡಿಸ್ಟ್ರಿಕ್ಟು ಜಂಗಲ್.	ತಿಳಿನೀರುಕಟ್ಟೆ ಪಟೇಲ್ ಶೇಷೈಯ್ಯಂಗಾರ್ ವಶದಲ್ಲಿ ಇದೆ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ ಫಾರೆಸ್ಟ್ರಿ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 28ನೆ ಆಗಸ್ಟು 1909.

ಮೈಸೂರು ತಾಲ್ಲೂಕು ವರುಣಾದ ಹೋಬಳಿಗೆ ಸೇರಿದ ಜೋಡಿ ಹೊಸಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮೈಸೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಅಕ್ಟೋಬರು ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚಿನ ತಪ್ಸೀಲ್ ಬಗ್ಗೆ ಸ್ರ 1909ನೆ ಇಸವಿ ಸೆಪ್ಟಂಬರ್ ತಾರೀಖು 9ನೆ ಮರ್ಕುಂ 36ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 724ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಚಾಂಡಿ,
ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರ್.